# ಭಾರತೀಯ ಜನತಾ ಪಾರ್ಟಿ

## 11, ಅಶೋಕ ರಸ್ತೆ, ನವದೆಹಲಿ–110001

**ಸಂಸದ ಹಾಗೂ ಬಾರತೀಯ ಜನತಾ ಪಕ್ಷದ ಮಾಜಿ ಅಧ್ಯಕ್ಷ ಶ್ರೀ ಎಂ.ವೆಂಕಯ್ಯ ನಾಯ್ಡು ಅವರು ಭಾರತದ ರಾಷ್ಟ್ರಪತಿಗಳ ಭಾಷಣದ ಕುರಿತು ನೀಡಿದ ಹೇಳಿಕೆ**

**ನವದೆಹಲಿ, 21 ಫೆಬ್ರವರಿ, 2013**

ರಾಷ್ಟ್ರಪತಿಗಳು ಸಂಸತ್ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣ, ಸಂಪೂರ್ಣ ನಿರಾಶಾದಾಯಕ, ಗೊತ್ತುಗುರಿಯಿಲ್ಲದ ಹಾಗೂ ನೀರಸವಾಗಿತ್ತು. ವ್ಯಾಪಕ ಭ್ರಷ್ಟಾಚಾರವಾಗಲಿ, ತಡೆಯಿಲ್ಲದ ಬೆಲೆ ಏರಿಕೆಯಾಗಲಿ, ಕೃಷಿ ವಲಯದ ಬಿಕ್ಕಟ್ಟಾಗಲಿ, ರೈತರ ಆತ್ಮಹತ್ಯೆಯಾಗಲಿ, ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯಾಗಲಿ, ಈ ರೀತಿ, ದೇಶ ಎದುರಿಸುತ್ತಿರುವ ಹಲವಾರು ಸವಾಲುಗಳ ಕುರಿತು ಅವರ ಭಾಷಣ ಯಾವುದೇ ಪರಿಹಾರ ಸೂಚಿಸಲಿಲ್ಲ. ಈ ಎಲ್ಲಾ ವಿಚಾರಗಳ ಉಪಶಮನಕ್ಕೆ ಸರ್ಕಾರ ಯಾವುದೇ ಮಾರ್ಗೋಪಾಯಗಳನ್ನು ಸೂಚಿಸಲಿಲ್ಲ.

ಗಂಭೀರ ಆರ್ಥಿಕ ಬಿಕ್ಕಟ್ಟು ಕುರಿತು ರಾಷ್ಟ್ರಪತಿಗಳ ಭಾಷಣದಲ್ಲಿ ಪ್ರಸ್ತಾಪಿಸಿದರು, ಶೇಕಡ 5.5ರ ವಿತ್ತೀಯ ಕೊರತೆ ಹಾಗೂ ಜಿಡಿಪಿ ವೃದ್ಧಿದರ ಶೇಕಡ 5ರ ಪ್ರಮಾಣಕ್ಕೆ ಇಳಿದಿರುವ ಗಂಭೀರ ವಿಚಾರಗಳ ಕುರಿತು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಯಾವುದೇ ಪರಿಹಾರ ಕ್ರಮಗಳನ್ನು ಸೂಚಿಸಿಲ್ಲ. ಸರ್ಕಾರ ಈ ವಿಚಾರದಲ್ಲಿ ಸಂಪೂರ್ಣ ಗೊಂದಲದಲ್ಲಿದ್ದು, ಆದ್ದರಿಂದಲೇ ರಾಷ್ಟ್ರಪತಿ ಭಾಷಣದ ಕಳೆಕುಂದಿತ್ತು.

ಕೇಂದ್ರ ಸಭಾಂಗಣದಲ್ಲಿ, ರಾಷ್ಟ್ರಪತಿಗಳ ಭಾಷಣ ನಡೆಯುವ ಸಂದರ್ಭದಲ್ಲಿ ಸಂಭವಿಸಿದ ಘಟನೆಗೆ ಆಡಳಿತ ಪಕ್ಷ ಜವಾಬ್ದಾರರಾಗಿದ್ದಾರೆ. ರಾಷ್ಟ್ರಪತಿಗಳ ಭಾಷಣದ ವಿರುದ್ಧ ಬಿತ್ತಿಪತ್ರಗಳ ಪ್ರದರ್ಶನ, ಘೋಷಣೆಗಳ ಕೂಗಾಟ, ಪ್ರತಿಭಟನೆಯಲ್ಲಿ ತೊಡಗಿದ ಯುಪಿಎ ಬೆಂಬಲಿತ ಪಕ್ಷಗಳ ಸದಸ್ಯರು ಹಿಂದೆಂದು ಕಾಣದ ರೀತಿ ವರ್ತಿಸಿದರು. ಯುಪಿಎ ಒಕ್ಕೂಟದಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಪ್ರತಿಪಕ್ಷಗಳ ಹೇಳಿಕೆಗೆ ಇದರಿಂದ ಪುಷ್ಠಿ ದೊರೆತಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸಮ್ಮಿಶ್ರ ಸರ್ಕಾರ ಹಾಗೂ ದೇಶ ನಡೆಸುವ ಕ್ಷಮತೆಯಿಲ್ಲವೆಂದು ದೃಢಪಟ್ಟಿದೆ.

*****